## ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಮಧುಗಿರಿ

**O.S. No.258/2013**

**DW-4**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ನರೇಂದ್ರಕುಮಾರ್ |
| ತಂದೆ/ ಗಂಡನ ಹೆಸರು | ಃ | ಕೆ.ಎಂ.ಕರಿಯಪ್ಪ |
| ವಯಸ್ಸು | ಃ | 52 ವರ್ಷಗಳು |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಕಳ್ಳಂಬೆಳ್ಳ |

**ಪ್ರಮಾಣವಚನ ಬೋಧಿಸಿದ ದಿನಾಂಕಃ 07-11-2022**

**ಮುಖ್ಯ ವಿಚಾರಣೆ ಃ ಶ್ರೀಆರ್.ಜೆ. ಪ್ರತಿವಾದಿ ಪರ ವಕೀಲರಿಂದ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಅಂಶಗಳೆಲ್ಲವೂ ಸತ್ಯವಾಗಿರುತ್ತದೆ. ಅದನ್ನು ನಾನೇ ಹೇಳಿ ಬರೆಸಿರುತ್ತೇನೆ ಹಾಗೂ ಅದಕ್ಕೆ ಸಹಿ ಮಾಡಿರುತ್ತೇನೆ.

ಪ್ರತಿವಾದ ಪತ್ರದಲ್ಲಿ ಕೋರಿರುವಂತೆ ವಾದಿಯ ದಾವೆಯನ್ನು ವಜಾಗೊಳಿಸಬೇಕಾಗಿ ಕೇಳಿಕೊಳ್ಳುತ್ತಿದ್ದೇನೆ.

(ಈ ಹಂತದಲ್ಲಿ ವಾದಿಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು)

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಮಧುಗಿರಿ.**

**ಪ್ರಮಾಣವಚನ ಬೋಧಿಸಿದ ದಿನಾಂಕ: 08-01-2024**

**ಪಾಟೀ ಸವಾಲು : ಶ್ರೀ ಪಿಡಿಟಿ ವಾದಿ ಪರ ವಕೀಲರಿಂದ**

ದಾವ ಎ ಪೆಡ್ಯೂಲ್ ಸ್ವತ್ತು ರಾಮದಾಸಪ್ಪರವರ ಸ್ವಾಧೀನ ಅನುಭದಲ್ಲಿ ಇದೆ. ದಾವ ಬಿ ಪೆಡ್ಯೂಲ್ ಸ್ವತ್ತು ರಾಮದಾಸಪ್ಪ ರವರ ಸ್ವಾಧೀನ ಅನುಭದಲ್ಲಿ ಇದೆ . ರಾಮದಾಸಪ್ಪ ರವರಿಗೆ ಕ್ರಯದ ಮೂಲಕ ಸದರಿ ಸ್ವತ್ತು ಬಂದಿತ್ತು . ಅವರು ಕ್ರಯಕ್ಕೆ ಕೊಂಡ ಸ್ವತ್ತಿನ ಚೆಕ್ಕು ಬಂದಿ ಪೂರ್ವಕ್ಕೆ ರಾಮಣ್ಣನವರು ಜಮೀನು , ಪಶ್ಚಿಮಕ್ಕೆ ಅಕ್ಕಸಾಲಿಗ ಪುಟ್ಟಯ್ಯ ರವರ ಜಮೀನು , ಉತ್ತರಕ್ಕೆ ಬೊಮ್ಮ ಲಿಂಗಪ್ಪ ಮತ್ತು ರಂಗಪ್ಪ ರವರ ಜಮೀನು ಮತ್ತು ದಕ್ಷಿಣಕ್ಕೆ ಸಣ್ಣ ಮಲ್ಲಯ್ಯರವರ ಜಮೀನು ಆಗಿರುತ್ತದೆ. ರಾಮದಾಸಪ್ಪರವರು ಒಂದೇ ಜಮೀನನ್ನು ಕೊಂಡುಕೊಡಿರುತ್ತಾರೆ. ಅವರು ಕೊಂಡು ಕೊಂಡ ಜಮೀನಿನ ಸ್ವಾಧೀನ ಅನುಭದಲ್ಲಿಯೇ ಇದ್ದಾರೆ.

ದಾವಾ ಎ ಷೆಡ್ಯೂಲ್ ಸ್ವತ್ತನ್ನು ರಾಮದಾಸಪ್ಪರವರು ಕ್ರಯಕ್ಕೆ ಪಡೆದುಕೂಂಡಿಲ್ಲ . ದಾವಾ ಎ ಷೆಡ್ಯೂಲ್ ಸ್ವತ್ತಿನ ಸ್ವಾಧೀನ ಅನುಭವದಲ್ಲಿ ರಾಮದಾಸಪ್ಪರವರು ಇಲ್ಲ ಎಂದರೆ ಸರಿ . ದಾವ ಎ ಪೆಡ್ಯೂಲ್ ಸ್ವತ್ತಿನಲ್ಲಿ ವಾದಿಯರು ಸ್ವಾಧೀನ ಅನುಭದಲ್ಲಿ ಇದ್ದಾರೆ ಎಂದರೆ ಸರಿಯಲ್ಲ . ದಾವ ಎ ಪೆಡ್ಯೂಲ್ ಸ್ವತ್ತಿನ್ನು ನಾನು ನೋಡಿಲ್ಲ . ಅದು ಯಾರ ಸ್ವಾಧೀನ ಅನುಭವದಲ್ಲಿ ಇದೆ ಎಂದು ಗೊತ್ತಿಲ್ಲ .

ಮರು ವಿಚಾರಣೆ ಇಲ್ಲ

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಮಧುಗಿರಿ.**